**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಸೋಮವಾರಪೇಟೆ.**

**ಓ.ಎಸ್. ನಂಬರ್ : 60/2022**

ಪಿ.ಡಬ್ಲ್ಯೂ : 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 31.01.2023

| | | |
|---|---|---|
| ಹೆಸರು | : | ಎಸ್.ಎಂ ಚಂದ್ರಪ್ಪ |
| ತಂದೆಯ ಹೆಸರು | : | ಮಲ್ಲಪ್ಪ |
| | : | |

**ಮುಖ್ಯವಿಚಾರಣೆ: ಶ್ರೀ ಡಿ.ಎಲ್ ವಕೀಲರಿಂದ : ವಾದಿಯ ಪರವಾಗಿ**

ನಾನು ವಾದಿ ಇದ್ದು ನನ್ನ ಮುಖ್ಯ ವಿಚಾರಣೆ ಸಾಕ್ಷ್ಯವಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆಸಿರುವುದನ್ನು ನಾನು ಹೇಳಿ ಬರೆಯಿಸಿದ್ದು ನಂತರ ಅದನ್ನು ಓದಿ ಸಹಿ ಮಾಡಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ನಾನು ದಿನಾಂಕ 23.05.1988 ರ ಮೂಲ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 1 ಎಂದು ದಿನಾಂಕ 18.07.1997 ರ ಮರಣ ಶಾಸನ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 2 ಎಂದು, ಮಲ್ಲಪ್ಪ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 3 ಎಂದು, ಎರಡು ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 4 ಮತ್ತು 5 ಎಂದು, ದಿಃ 22.05.1982 ರ

ವಿಭಾಗ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 6 ಎಂದು, ದಿಃ 05.03.1992 ರ ವಿಭಾಗ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 7 ಎಂದು ಗುರುತಿಸಲಾಯಿತು. ಆದುದರಿಂದ ದಾವೆಯಲ್ಲಿ ಕೇಳಿದಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲು : ಪ್ರತಿವಾದಿಯ ಪರವಾಗಿ ಶ್ರೀ ಡಿ.ಕೆ.ಟಿ ವಕೀಲರಿಂದ ಇಲ್ಲ**

**ಪಾಟೀ ಸವಾಲು : 1, 3 ರಿಂದ 8 ನೇ ಪ್ರತಿವಾದಿಯ ಪರವಾಗಿ ಏಕಪಕ್ಷೀಯವಾದುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ: ಇರುವುದಿಲ್ಲ**

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸೋಮವಾರಪೇಟೆ.